**ಸಾಕ್ಷಿಯನ್ನು ದಿಃ20.11.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎನ್ ಆರ್ ವಕೀಲರಿಂದಃ**

ನಾನು ಮತ್ತು 3 ನೇ ವಾದಿ ಪ್ರಧಾನ ಸಿವಿಲ್ ನ್ಯಾಯಾಲಯ ಬಂಗಾರಪೇಟೆಯಲ್ಲಿ ಒ ಎಸ್ 233–2009 ರಂತೆ ನನ್ನ ತಂದೆ ವಿರುದ್ಧ ವಿಭಾಗ ಕೋರಿ ದಾವೆ ಹೂಡಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆಯನ್ನು 1 ನೇ ಪ್ರತಿವಾದಿಯನ್ನಾಗಿ ಮತ್ತು ಈ ಪ್ರಕರಣದ ಪ್ರತಿವಾದಿಗಳನ್ನು ಇತರ ಪ್ರತಿವಾದಿಗಳನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ನನ್ನ ತಂದೆ ನಿರ್ಲಕ್ಷದಿಂದ ನಮ್ಮ ಕುಟುಂಬನ್ನು ನೋಡಿಕೊಳ್ಳುತ್ತಿರಲಿಲ್ಲ ಆದ ಕಾರಣ ಅವರನ್ನು ಪ್ರತಿವಾದಿಯನ್ನಾಗಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ನನ್ನ ತಂದೆ ಮತ್ತು ನನ್ನ ಸಹೋದರ ವಾದಿಗಳಾಗಿರುತ್ತೀರಿ ಎಂದರೆ ಸರಿ.

ನನ್ನ ತಾತನ ಹೆಸರು ಹೆಚ್.ಎನ್.ಸುಬ್ರಮಣ್ಯಶಾಸ್ತ್ರಿ ಎಂದರೆ ಸರಿ. ಅವರಿಗೆ ಒಟ್ಟು ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರುಗಳೆಂದರೆ ನನ್ನ ತಂದೆ ಅಶ್ವತ್ ನಾರಾಯಣಶಾಸ್ತ್ರಿ, ಪ್ರತಿವಾದಿಗಳ ತಂದೆ ಹೆಚ್. ಎಸ್. ಸುಬ್ರಮಣ್ಯಶಾಸ್ತ್ರಿ ಮತ್ತು ರಾಮಸುಬ್ಬಮ್ಮ ಆಗಿರುತ್ತಾರೆ. ಸದರಿ ರಾಮಸುಬ್ಬಮ್ಮ ಮತ್ತು ಆಕೆಯ ಗಂಡ ಮರಣ ಹೊಂದಿದ್ದು, ಅವರ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ರಾಮಸುಬ್ಬಮ್ಮರವರ ಮಕ್ಕಳನ್ನು ನಾವು ಈ ದಾವೆಯಲ್ಲಿ ಮತ್ತು ಒಎಸ್ 233–2009 ರಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ.

ನನಗೆ ಒಬ್ಬ ಅಕ್ಕ ಮತ್ತು ಇಬ್ಬರು ತಂಗಿ ಇರುತ್ತಾರೆ. ಅವರುಗಳಲ್ಲಿ ಪಾರ್ವತಿ ಎಂಬ ನನ್ನ ತಂಗಿ ತೀರಿಹೋಗಿದ್ದು, ಅವರ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ತಂದೆ ದಿಃ21.08.1979 ರಂದು ನನ್ನ ತಾತನ ಪರವಾಗಿ ನಿಪಿ-1 ರಂತೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟು ಕುಟುಂಬದಿಂದ ಹೊರಬಂದಿರುತ್ತಾರೆ ಎಂದರೆ ಸರಿ. ಸದರಿ ನಿಪಿ-1 ರಲ್ಲಿ ಈ ಪ್ರಕರಣದ ದಾವಾ ಸ್ವತ್ತು ಮತ್ತು ಒಎಸ್ 233-2009 ರಲ್ಲಿ ನಮೂದಿಸಿರುವ ಸ್ವತ್ತುಗಳು ಇರುವುದಿಲ್ಲ ಎಂದರೆ ಸರಿ. ಆದ ಕಾರಣ ನನಗಾಗಲಿ, ನನ್ನ ಸಹೋದರನಿಗಾಲಿ ಈ ದಾವಾ ಸ್ವತ್ತು ಮತ್ತು ಒಎಸ್ 233-2009 ರಲ್ಲಿ ನಮೂದಿಸಿರುವ ಸ್ವತ್ತುಗಳ ಮೇಲೆ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ನನಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಗೆ ನಿಪಿ-1 ರಂತೆ ಸದರಿ ಸ್ವತ್ತುಗಳು

ಬಂದಿರುತ್ತವೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-1 ನ್ನು ತೋರಿಸಿ, ಸದರಿ ಪತ್ರದಲ್ಲಿ ಈ ದಾವಾ ಸ್ವತ್ತು ಮತ್ತು ಒಎಸ್ 233-2009 ರಲ್ಲಿ ನಮೂದಿಸಿರುವ ಸ್ವತ್ತುಗಳು ಇದರಲ್ಲಿ ಇರುವುದಿಲ್ಲ ಎಂದು ಕೇಳಿಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ.

ನಾನು ಮತ್ತು ನನ್ನ ಸಹೋದರ ಕೋಲಾರ ನ್ಯಾಯಾಲಯದಲ್ಲಿ ಒ ಎಸ್ 59-1998 ರಂತೆ ನನ್ನ ತಂದೆ ಮತ್ತು ಪ್ರಸ್ತುತ ಪ್ರತಿವಾದಿಗಳ ವಿರುದ್ಧ ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಅದರ ಮೇಲೆ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯಲ್ಲಿ ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಒಎಸ್ ನಂ. 59-1998 ದಾವೆಯಲ್ಲಿ ಈ ದಾವಾ ಸ್ವತ್ತು ಮತ್ತು ಒಎಸ್ ನಂ. 233-2009 ರ ದಾವಾ ಸ್ವತ್ತುಗಳನ್ನು ಸದರಿ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ಉಚ್ಚ ನ್ಯಾಯಾಲಯದಲ್ಲಿ ಆದ ರಾಜಿ ಅನ್ವಯ ನಮಗೆ ಬಂದಿರುವುದಿಲ್ಲ ಎಂದರೆ ಸರಿ.

ದಿಃ05.02.1994 ರಲ್ಲಿ ನಿಪಿ-1 ನ್ನು ಜಾರಿಗೊಳಿಸಿದ ನಂತರ ಉಳಿಕೆ ಸ್ವತ್ತುಗಳನ್ನು ಹೆಚ್.ಎನ್.ಸುಬ್ಬರಾಯಶಾಸ್ತ್ರಿ ರವರ ಹೆಸರಿಗೆ ಖಾತೆ ಮಾಡಿಕೊಡಲು ನಾವು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹೆಚ್.ಎನ್.ಸುಬ್ಬರಾಯಶಾಸ್ತ್ರಿರವರು ಆರ್ ಆರ್ ಟಿ 4/1996-97 ರಂತೆ ದಾವಾ ಷಡ್ಯೂಲ್ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡುವಂತೆ ತಹಶೀಲ್ದಾರ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ನಾನು ದಾವಾ ಸ್ವತ್ತುಗಳನ್ನು ಒಳಗೊಂಡಂತೆ ಇತರ ಸ್ವತ್ತುಗಳು ಸದರಿ ಹೆಚ್.ಎನ್.ಸುಬ್ಬರಾಯಶಾಸ್ತ್ರಿರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹೆಚ್.ಎನ್.ಸುಬ್ಬರಾಯಶಾಸ್ತ್ರಿರವರು ಮರಣ ಹೊಂದಿದ ನಂತರ 4 ನೇ ಪ್ರತಿವಾದಿ ಮುರಳಿ ರವರು ಸದರಿ ಸ್ವತ್ತುಗಳ ಖಾತೆ ತನ್ನ ಹೆಸರಿಗೆ ಮಾಡಿಕೊಂಡುವಂತೆ ಅರ್ಜಿ ಸಲಿಸಿದ್ದು ನಾವು ಅದಕ್ಕೆ ತಕರಾರು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇರೆಗೆ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ನಾವು ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಆರ್ ಎ 323/2014-15 ರಂತೆ ಅಫೀಲು ಸಲ್ಲಿಸಿರುತ್ತೇವೆ ಎಂದರೆ ಸರಿ. 4 ನೇ ಪ್ರತಿವಾದಿ ಹೆಸರಿಗೆ ಖಾತೆ ಆದ ಆದೇಶದ ಬಗ್ಗೆ 2009 ರಲ್ಲಿ ನನಗೆ ಗೊತ್ತಾಗಿರುತ್ತದೆ.
**ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

(ದೀಪು ಬಿ.ಸಿ.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.